ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಚಾಮುಂಡಿ ಬೆಟ್ಟದ ಪ್ರದೇಶವು ನೋಟಿಫೈಡ್ ಏರಿಯಾದ ಅಡಿಯಲ್ಲಿ ಬರುತ್ತದೆ. ಅಲ್ಲಿ ೧೬ ಅಂಗಡಿಗಳು ಅನಧಿಕೃತವಾಗಿ ಬಂದಿದ್ದುವು. ಈ ೧೬ ಅಂಗಡಿಯವರ ಪೈಕಿ ಇಬ್ಬರು ಪರವಾನಿಗೆ ಪಡೆದಿದ್ದಾರೆ. ಇನ್ನು ೧೪ ಅಂಗಡಿಯವರು ಯಾರೂ ಕೂಡ ಸ್ವಂತವಾಗಿ ನಡೆಸುತ್ತಿಲ್ಲ. ಅನಧಿಕೃತವಾಗಿ ಅವರು ಅಂಗಡಿಯನ್ನು ನಡೆಸುತ್ತಿದ್ದಾರೆ. ಇವರುಗಳು ಪಿಗ್ಗಿ ಕೊಟ್ಟುಕೊಂಡು, ಅವರಿಂದ ೨ ಸಾವಿರ ೩ ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಹಣ ತೆಗೆದುಕೊಂಡಿದ್ದಾರೆ. ಈ ಪ್ರದೇಶ ನೋಟಿಫೈಡ್ ಏರಿಯಾದಲ್ಲಿ ಇರುವುದರಿಂದ ಈ ಜನರಿಗೆ ಬೇರೆ ಕಡೆ ಜಾಗ ಒದಗಿಸಿಕೊಡಲು ವ್ಯವಸ್ಥೆ ಮಾಡಿಸುತ್ತೇನೆ.

(13) ಮುಧೋಳ ತಾಲ್ಲೂಕಿನ ವಿಂರ್ಜಿ ಗ್ರಾಮಕ್ಕೆ ಹೊಸ ನಾವೆಯನ್ನು ಸರ್ಮಿಸುವುದು

ಶ್ರೀ ಬಿ.ಜಿ. ಜವಳಿಂಡಿ (ಮುಧೋಳ).—ಮಾನ್ಯ ಅಧ್ಯಕ್ಷರೆ, ಮುಧೋಳ ತಾಲ್ಲೂಕಿನಲ್ಲಿ ಘಟಪ್ರಭಾ ನದಿ ಹರಿಯುತ್ತಿದ್ದು, ಆ ನದಿಗೆ ೧೯೮೩ರಲ್ಲಿ ಮಹಾಪೂರ ಬಂದು ಅನಾಹುತವಾಯಿತು. ನದಿಯದಂಡೆಯ ಹತ್ತಿರ ಇರುವ ಗ್ರಾಮಗಳಿಗೆ ಸಂಚಾರ ಬಂದ್ ಆಯಿತು. ನದಿಯು ಊರೆಲ್ಲಾ ಸುತ್ತುವರಿದಿದ್ದರಿಂದ ಜನರೆಲ್ಲಾ ಮನೆಯ ಭಾವಣಿಯ ಮೇಲೆ ಹಲವಾರು ದಿನಗಳನ್ನು ಕಳೆದರು. ಇಂಥ ಸಮಯದಲ್ಲಿ ಆಗಿನ ಕಂದಾಯ ಸಚಿವರು ಹೆಲಿಕ್ಯಾಪ್ಟರ್‌ನಲ್ಲಿ ಸಮೀಕ್ಷೆ ಮಾಡಿ ನದಿಯ ಹತ್ತಿರ ಇರುವ ಗಾಮವಾದ ಮಿರ್ಜಿಗೆ ನಾವೆಯನ್ನು ಮಂಜೂರು ಮಾಡಲಾಯಿತು.

ಈ ನಾವೆಯನ್ನು ಪೂರೈಸಲು ಮೆಸರ್ಸ್ ಶ್ರೀ ಎಲ್.ವಿ. ಮುಚ್ಚಂಡಿ ಮತ್ತು ಸನ್ಸ್, ಬೆಳಗಾಂ ಇವರಿಗೆ ಕೊಡಲಾಯಿತು. ಕಾರ್ಯ ನಿರೀಕ್ಷಕರು ಬಂದರು ಮತ್ತು ಅಂತರ್ಜಲಮಾರ್ಗ, ಬಾಗಲಕೋಟೆ, ಇವರು ನಾವೆ ಯೋಗ್ಯವಿದೆ ಎಂದು ಶಿಫಾರಸು ಪತ್ರ ಕೊಟ್ಟರು. ಇದಾದ ಎರಡು ದಿನಗಳ ನಂತರ ಅಂದರೆ ದಿನಾಂಕ ೮ನೇ ಜುಲೈ ೧೯೮೬ ರಂದು ನಾವೆಯನ್ನು ಸಂಚಾರಕ್ಕೆ ನದಿಯಲ್ಲಿ ಬಿಡಲಾಯಿತು. ಅದು ಸಮತೋಲವನ್ನೇ ಕಳೆದುಕೊಂಡು ನಾವೆ ನದಿಯಲ್ಲಿ ಮುಳುಗುವ ಸಂಭವವಿತ್ತು. ಮತ್ತೆ ನಿರೀಕ್ಷಕರನ್ನು ಕರೆದು ತೋರಿಸಿದಾಗ ನಾವೆ ಯೋಗ್ಯವಿಲ್ಲವೆಂದು ದಿನಾಂಕ ೨೭ನೇ ಜುಲೈ ೧೯೮೬ ರಂದು ಸರ್ಟಿಫಿಕೇಟ್ ಕೊಟ್ಟರು. ಆಮೇಲೆ ಮಿರ್ಜಿ ಗ್ರಾಮದ ಜನತೆಗೆ ಸಂಚಾರ ಇಲ್ಲದಾಯಿತು. ಈ ಬಗ್ಗೆ ಇಲಾಖೆಯ ಅಧಿಕಾರಿಗಳು ನಾವೆ ಪೂರೈಸಿದ ಶ್ರೀ ಮುಚ್ಚಂಡಿ ಮತ್ತು ಸನ್ಸ್, ಬೆಳಗಾಂ ಇವರಿಗೆ ಎಷ್ಟೋ ಸಲ ಪತ್ರ ವ್ಯವಹಾರ ಮಾಡಿದರೂ ಅವರಿಂದ ಯಾವುದೇ ಜವಾಬ್ದಾರಿಯ ಪ್ರತಿಕ್ರಿಯೆ ಬಂದಿಲ್ಲ. ಈಗ ಮಳೆಗಾಲ ಪ್ರಾರಂಭವಾಗಿದೆ. ನದಿ ತುಂಬಿ ಹರಿಯುತ್ತಿದೆ. ಮಿರ್ಜಿ ಗ್ರಾಮಕ್ಕೆ ಬೇರೆ ಗ್ರಾಮಗಳಿಗೆ ಹೋಗಲು ಸಂಚಾರದ ವ್ಯವಸ್ಥೆ ಇಲ್ಲವಾಗಿದೆ. ಸುಮಾರು ರೂ. ೬೭,೦೦೦-೦೦ ವೆಚ್ಚದಿಂದ ತಂದಿರುವ ಈ ಹೊಸ ನಾವೆ ರಿಪೇರಿಗೆ ಬಂದಿದೆ. ಆದುದರಿಂದ ಈ ಘಟನೆಗೆ ಕಾರಣವಾದ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಮಿರ್ಜಿ ಗ್ರಾಮಕ್ಕೆ ಹೊಸ ನಾವೆಯನ್ನು ಪೂರೈಸಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರು).—೬೭ ಸಾವಿರ ರೂಪಾಯಿ ಬೆಲೆ ಕೊಟ್ಟು ತಂದಂಥ ನಾವೆ ರಿಪೇರಿಗೆ ಬಂದಿದೆ, ಇದನ್ನು ರಿಪೇರಿ ಮಾಡಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದನ್ನು ರಿಪೇರಿ ಮಾಡಿಸಿಕೊಡುತ್ತೇವೆ.

(14) ಸಹಕಾರಿ ಸಂಘಗಳ ಲೆಕ್ಕ ಪತ್ರಗಳು ಪೂರ್ಣಗೊಂಡು ಅವುಗಳ ಮಹಾ ಸಭೆಯನ್ನು ನಡೆಸುವುದು

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರುವ ಹೆಚ್ಚಿನ ಎಲ್ಲಾ ಸಹಕಾರಿ ಸಂಘಗಳ ಲೆಕ್ಕಪತ್ರಗಳ ವರ್ಷ ಪ್ರತಿ ವರ್ಷ ಜೂನ್ ತಿಂಗಳ ಅಂತ್ಯಕ್ಕೆ ಮುಗಿಯುತ್ತದೆ. ಕಾನೂನಿನಂತೆ ಲೆಕ್ಕಪತ್ರಗಳು ಅಂತ್ಯವಾಗಿ ಮೂರು ತಿಂಗಳೊಳಗೆ ಎಲ್ಲಾ ಸಹಕಾರಿ ಸಂಘಗಳೂ ಮಹಾ ಸಭೆಯನ್ನು ನಡೆಸತಕ್ಕದ್ದು. ಸಹಕಾರಿ ಚಳುವಳಿಯ ಬೆಳವಣಿಗೆಗೆ ಮಹಾ ಸಭೆ ಸಕಾಲದಲ್ಲಿ ನಡೆದು ಲೆಕ್ಕಪತ್ರಗಳ ಪರಿಶೀಲನೆ ಹೊಸ ವರ್ಷದ ಖರ್ಚುಗಳ (ಬಜೆಟ್) ಮತ್ತು ಇತರ ಯೋಜನೆಗಳ ಮಂಜೂರಾತಿ ಆಗಬೇಕಾಗಿದ್ದು ಅವಶ್ಯ ಸಹಕಾರಿ ಸಂಘಗಳ ಸರ್ವ ಸದಸ್ಯರು ವರ್ಷಕ್ಕೊಮ್ಮೆಯಾದರೂ ಸೇರಿ ತಮ್ಮ ಸಂಘದ ಬಗ್ಗೆ ವಿಚಾರ ವಿಮರ್ಶೆ ನಡೆಸಬೇಕಾಗಿದ್ದು ಚಳುವಳಿಯ ಹಿತದೃಷ್ಟಿಯಿಂದಲೂ ಅತಿ ಅವಶ್ಯ.